ಅ) ಸಿಂಧನೂರು ನಗರದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಶಾಸನ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಬಂದಿದೆ.

ಆ) ೧೧.೧೦ ಲಕ್ಷ ರೂ.ಗಳ ಅಂದಾಜು ವೆಚ್ಚದ ನೀರು ಸರಬರಾಜು ಅಭಿವೃದ್ಧಿ ಯೋಜನೆಗೆ ಸರ್ಕಾರ ಮಂಜೂರಾತಿ ನೀಡಿದೆ. ಅಭಾವ ಕಾವಲುಗಾರಿಗಳಲ್ಲಿ ಕೊಳವೆ ಬಾವಿಗಳನ್ನು ಕೂಡ ತೋಡಿ, ಕೈ ಪಂಪುಗಳನ್ನು ಅಳವಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ.

ಶ್ರೀ ಆರ್. ನಾರಾಯಣಪ್ಪ.—೧೧.೧೦ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ನೀರು ಸರಬರಾಜು ಅಭಿವೃದ್ಧಿ ಯೋಜನೆ ಮಂಜೂರಾತಿಯನ್ನು ನೀಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದು ಓವರ್ ಹೆಡ್ ಟ್ಯಾಂಕ್‌ಗೆ ಸಂಬಂಧಪಟ್ಟದ್ದು. ಆದರೆ ಇದರ ಮೂಲ ಯೋಜನೆಯ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಹಲವಾರು ಯೋಜನೆಗಳಲ್ಲಿ ನಗರಗಳಿಗೆ ನೀರನ್ನು ಒದಗಿಸತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಸನ್ಮಾನ್ಯ ಸದಸ್ಯರು ಹೇಳತಕ್ಕ ವಿಚಾರವನ್ನೂ ಕೂಡ ಪರಿಶೀಲನೆ ಮಾಡತಕ್ಕ ಯೋಚನೆಯಲ್ಲಿಟ್ಟುಕೊಂಡಿದ್ದೆವೇ ಎನ್ನುವ ವಿಷಯವನ್ನು ಅವರಿಗೆ ಹೇಳುತ್ತೇನೆ.

ಶ್ರೀ ಆರ್. ನಾರಾಯಣಪ್ಪ.—೧೯೮೨-೮೩ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ತುಂಗಭದ್ರಾ ಕಾಲುವೆಯ ೪೦ನೇ ಉಪ ಕಾಲುವೆಯ ಮೂಲಕ ಸಿಂಧನೂರು ನಗರಕ್ಕೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂಬ ಯೋಜನೆಯನ್ನು ಕೈಬಿಡಲಾಗಿದೆ ಎಂಬುದಾಗಿ ಕೇಳಿದ್ದೇನೆ. ಅದರ ಬದಲು ತುಂಗ ಭದ್ರಾ ನದಿಯಿಂದಲೇ ನೀರನ್ನು ತರತಕ್ಕಂತಹ ಯೋಜನೆಯನ್ನು ತಯಾರು ಮಾಡಿದ್ದಾರೆಂದು ಕೇಳಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರಿಂದ ಸೂಕ್ತ ವಿವರಣೆಯನ್ನು ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದೀ ವರ್ಷದಲ್ಲಿ ನೀರು ಸಿಕ್ಕುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ತುಂಗಾ ಭದ್ರಾ ಕಾಲುವೆಯ ೪೦ನೇ ಉಪ ಕಾಲುವೆಯ ಮೂಲಕ ನೀರನ್ನು ತೆಗೆದುಕೊಳ್ಳತಕ್ಕಂತಹ ಯೋಜನೆಯನ್ನು ಕೈಬಿಡಲಾಗಿದೆ.

ನಗರ ಸಭೆಯ ವ್ಯಾಪ್ತಿಗೆ ಬರುವ ಹಳ್ಳಿಗಳಿಗೆ ಸೌಲಭ್ಯಗಳು.

೬೭ ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಗ್ರಾಮಾಣ ಕ್ಷೇತ್ರದಲ್ಲಿ ಲಭ್ಯವಿದ್ದ ಸೌಕರ್ಯಗಳು ಮಹಾನಗರ ಪಾಲಿಕೆಯ ಪರಿಮಿತಿಯೊಳಗೆ ಬಂದ ಹಳ್ಳಿಗಳಿಗೆ ವಿಸ್ತರಿಸಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಪ್ರಸ್ತಾಪವೇನಾದರೂ ಇದ್ದರೆ, ಮಹಾನಗರ ಸಭೆಯ ಸರಹದ್ದಿನಲ್ಲಿ ಬರುವ ಪುಟ್ಟಹಳ್ಳಿ (ಹ್ಯಾಮ್‌ಲೆಟ್ಸ್)ಗಳನ್ನು ಮಹಾನಗರ ಸಭೆಯ ವ್ಯಾಪ್ತಿಯಿಂದ ಹೊರಗುಳಿದ ಪಂಚಾಯತ್ ಮಂಡಲಿಯೊಳಗೆ ಕೂಡಿಸಲು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಲಾಗುವುದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಬಂದಿದೆ.

ಆ) ಸರಕಾರದ ಮುಂದೆ ಈಗ ಇಂಥ ಪ್ರಸ್ತಾವನೆ ಇಲ್ಲ.

ಶ್ರೀ ಜ್ಞಾನದೇವ ದೊಡ್ಡ ಮೇಟಿ.—ಗಮನಕ್ಕೆ ಬಂದಿದೆ ಎಂಬುದಾಗಿ ಉತ್ತರವನ್ನು ಹೇಳಿದ್ದೀರಿ. ಹಾಗಿದ್ದರೆ ಆ ಹಳ್ಳಿಗಳು ತ್ರಿಶಂಕು ಸ್ವರ್ಗದಲ್ಲಿರುವಂತೆ ಇವೆ. ಆ ಹಳ್ಳಿಗಳಿಗೂ ಪೌರ ಸೌಲಭ್ಯಗಳನ್ನು ಒದಗಿಸಿಕೊಡುವ ಕಾರ್ಯಕ್ರಮವನ್ನು ಇದುವರೆವಿಗೂ ಏಕೆ ಹಾಕಿಕೊಂಡಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್ —ಆಯಾ ನಗರಸಭೆಗಳೂ ಹಾಗೂ ಪುರಸಭೆಗಳಿಗೆ ಸಂಬಂಧಪಟ್ಟ ವಿಚಾರ ಇದು. ಪುರಸಭೆಗಳ ಹಾಗೂ ನಗರಸಭೆಗಳ ವ್ಯಾಪ್ತಿಗೆ ಈ ಹಳ್ಳಿಗಳನ್ನು ಸೇರಿಸಿಕೊಂಡ ಮೇಲೆ ಕನಿಷ್ಟ ಪ್ರಮಾಣದ ಪೌರ ಸೌಲಭ್ಯಗಳನ್ನು ಒದಗಿಸತಕ್ಕ ಕೆಲಸ ಆಯಾ ಸ್ಥಳೀಯ ಸಂಸ್ಥೆಗಳಿಗೆ ಸೇರಿದ್ದು. ಒಂದು ಅವರು ಆ ರೀತಿ ಮಾಡದಿದ್ದರೆ ಕೇಳಿ ಪಡೆಯತಕ್ಕಂತಹ ವಿಚಾರ ಸನ್ಮಾನ್ಯ ಸದಸ್ಯರಿಗೆ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಜ್ಞಾನದೇವ ದೊಡ್ಡ ಮೇಟಿ.—ಇಂತಹ ಪ್ರಸಂಗಗಳಲ್ಲಿ ಸೌಕರ್ಯವನ್ನು ಒದಗಿಸದಿದ್ದರೆ, ಹಳ್ಳಿಗಾಡಿನ ದೃಷ್ಟಿಯಿಂದ ಅವುಗಳನ್ನು ಬಿಟ್ಟುಕೊಡುತ್ತಿಲ್ಲ, ಅಂತಹ ಸಂದರ್ಭದಲ್ಲಿ ಸರ್ಕಾರದವರು ಅನುಮತಿಯನ್ನು ಕೊಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಪರಿಶೀಲನೆ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಹನ ಅಪಘಾತಗಳು.

೬೮೭. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫ರ ಜನವರಿಯಿಂದ ೧೯೮೫ರ ಮಾರ್ಚ್ ಅಖೈರ್‌ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಭವಿಸಿದ ವಾಹನ ಅಪಘಾತಗಳು ಎಷ್ಟು? (ತಾಲೂಕುವಾರು ವಿವರಗಳನ್ನೊದಗಿಸುವುದು).

ಆ) ಇದರಲ್ಲಿ ಸಾವು ಸಂಭವಿಸಿದ ಅಪಘಾತಗಳೆಷ್ಟು? ಹಾಗೂ ಸಾವು ಸಂಭವಿಸದೇ ಇದ್ದ ಅಪಘಾತಗಳೆಷ್ಟು?

ಇ) ಪ್ರತಿ ವರ್ಷ ಸಾವಿಗೀಡಾದವರ ಸಂಖ್ಯೆ ಎಷ್ಟು? ಹಾಗೂ ಆ ಬಗ್ಗೆ ಎಷ್ಟು ದಾವೆಗಳು ದಾಖಲಾಗಿವೆ?

ಈ) ಪ್ರತಿ ವರ್ಷ ವಾಹನ ಕಾಯಿದೆಯ ಉಲ್ಲಂಘನೆಯ ಅಪರಾಧಗಳೆಷ್ಟು?

ಉ) ಇವುಗಳನ್ನು ಕಡಿಮೆಗೊಳಿಸಲು ಸರ್ಕಾರದವರು ತೆಗೆದುಕೊಳ್ಳುವ ಕಾರ್ಯಕ್ರಮಗಳೇನು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

		ಜನವರಿ ೮೫ ರಿಂದ ಡಿಸೆಂಬರ್ ೮೫ರವರೆಗೆ	ಜನವರಿ ೮೪ ರಿಂದ ಡಿಸೆಂಬರ್ ೮೪ರವರೆಗೆ	ಜನವರಿ ೮೫ ರಿಂದ ಮಾರ್ಚ್ ೮೫ರ ವರೆಗೆ
		೭೩೨	೯೦೩	೨೧೦
ಆ)	ಸಾವು ಸಂಭವಿಸಿದ ಅಪಘಾತಗಳು.	೧೪೯	೧೯೨	೫೩
	ಸಾವು ಸಂಭವಿಸದ ಅಪಘಾತಗಳು.	೫೮೩	೭೧೦	೧೫೭
ಇ)	ಸಾವಿಗೀಡಾದವರ ಸಂಖ್ಯೆ	೧೬೮	೨೦೩	೫೮
	ದಾಖಲಾಗಿರುವ ದಾವೆಗಳು	೫೮೧	೫೨೧	೯೦
ಈ)		೨೩,೪೦೨	೨೪,೪೩೨	೬,೧೧೦

ಉ) ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಈ ಕೆಳಗೆ ಕಂಡ ವಿಷಯಗಳಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ಕೊಡಲಾಗಿದೆ.

೧) ವಾಹನ ಚಾಲನೆಯ ಪರವಾನಿಗೆಗಳನ್ನು ಕೊಡಲಂ ಅಭ್ಯರ್ಥಿಗಳನ್ನು ಸರಿಯಾಗಿ ಚಾಲನೆಯಲ್ಲಿ ಪರೀಕ್ಷಿಸುವುದು.